

### ತಂತ್ರಜ್ಞಾನ ಆಧರಿತ ಕೃಷಿ ಈ ಕಾಲಘಟ್ಟದ ಔಚಿತ್ಯವೂ ಹೌದು!

# ತಂತ್ರಜ್ಞಾನದ ಮೆರುಗು ಕೃಷಿಯೊಳಗೆ ಬೆರಗು

■ ಶಶಿಕುಮಾರ್ ಸಿ.

ಕೃಷಿಯನ್ನು ದೇಶದ ಅಸಂಖ್ಯಾತ ಜನರು ವರ್ಷಾನುವರ್ಷಗಳಿಂದ ಕುಲಕಸುಬಾಗಿ ಆರಾಧಿಸಿಕೊಂಡು, ಅದನ್ನೇ ಬದುಕಾಗಿಸಿಕೊಂಡು ಬಂದಿದ್ದಾರೆ. ಇದೇ ಸಾಂಪ್ರದಾಯಿಕ ಕೃಷಿ ಪದ್ಧತಿಗೆ ಆದ್ಯತೆ ನೀಡುವುದರ ಜೊತೆಗೆ ತಂತ್ರಜ್ಞಾನ ಆಧರಿತ ಕೃಷಿ ಪದ್ಧತಿಯತ್ತ ಮುಖಮಾಡಿರುವ ದೊಡ್ಡ ಸಮುದಾಯವನ್ನು ದೇಶದ ಎಲ್ಲ ದಿಕ್ಕುಗಳಲ್ಲೂ ಕಾಣಬಹುದು. ಈ ಹೊಸ ಬೆಳವಣಿಗೆಯು ತಂತ್ರಜ್ಞಾನದ ಬೇರಿನೊಂದಿಗೆ ಕೃಷಿ ಬದುಕು ಕಟ್ಟಿಕೊಳ್ಳುವ ಸಮಕಾಲೀನ ಔಚಿತ್ಯಗಳಲ್ಲೊಂದಾಗಿದೆ.

ಜಾಗತಿಕ ಸಮಸ್ಯೆಗಳಲ್ಲಿ ಪ್ರಮುಖವಾದ 'ಹವಾಮಾನ ಬದಲಾವಣೆ'ಯಿಂದ ಹೆಚ್ಚು ಬಾಧಿತರಾಗುತ್ತಿರುವುದು ಕೃಷಿ ಸಮುದಾಯ. ಈ ಜ್ವಲಂತ ಸಮಸ್ಯೆಯ ಬೆನ್ನಿಗೆ ಜೋತು ಬಿದ್ದಂತಿರುವುದು ಮಳೆಯ ಅನಿಶ್ಚಿತತೆ, ಆರ್ಥಿಕ ಮತ್ತು ಮಾರುಕಟ್ಟೆ ಸಮಸ್ಯೆಗಳು, ಬೆಲೆ ಅಸ್ಥಿರತೆ ಇತ್ಯಾದಿ. ಈ ಎಲ್ಲ ಸಮಸ್ಯೆಗಳಿಗೆ ಆಧುನಿಕ ತಂತ್ರಜ್ಞಾನವು ಪರಿಹಾರವಾಗಬಲ್ಲದೇ, ಗೊತ್ತಿಲ್ಲ. ಕೆಲ ತೊಡಕುಗಳನ್ನಂತೂ ನಿವಾರಿಸುವ ಸಾಮರ್ಥ್ಯ ಹೊಂದಿದೆ ಎಂದಷ್ಟೇ ಹೇಳಬಹುದು.

ಕೃಷಿ ವಲಯದಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆಯು ಇಂದು ಎಲ್ಲೆಡೆ ಏರುಗತಿ ಕಾಣುತ್ತಿದೆ. ಹಲವು ವಿಧಗಳಲ್ಲಿ ರೈತರ ನೆರವಿಗೆ ನಿಂತಿದೆ. ಹೊಸ ಮತ್ತು ಸುಧಾರಿತ ತಂತ್ರಜ್ಞಾನಗಳ ಅಳವಡಿಕೆಯು ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುತ್ತಿದೆ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಇದು ಬಹು